# ಬಿಳಿ ಹಾಲಿನ ಹಿಂದಿರುವ ಕಾಣದ ಕರಿ ಸತ್ಯಗಳು

**ಧರಣಿ ಮಂಡಲ**



• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ಭಾರತ ಹಾಲು ಉತ್ಪಾದನೆಯಲ್ಲಿ ಹಲವು ವರ್ಷಗಳಿಂದ ಪ್ರಪಂಚದಲ್ಲೇ ಅಗ್ರ ಸ್ಥಾನದಲ್ಲಿದೆ. ಪ್ರಪಂಚದ ಸುಮಾರು ಶೇಕಡಾ 24ರಷ್ಟು ಹಾಲು ನಮ್ಮಲ್ಲಿಯೇ ಉತ್ಪತ್ತಿಯಾಗುತ್ತಿದೆ. ಇದು ಒಂದಷ್ಟು ಮುಂದುವರೆದ ದೇಶಗಳಿಗೆ ಸಹಿಸಲಾಗುತ್ತಿಲ್ಲ. ಹೀಗಾಗಿ ಒಂದಲ್ಲ ಒಂದು ಕಸರತ್ತು ಮಾಡುವ ಮೂಲಕ ಅಗ್ರಸ್ಥಾನದಿಂದ ಭಾರತವನ್ನು ಹಿಂದಿಕ್ಕುವ ಪ್ರಯತ್ನವನ್ನು ಮಾಡುತ್ತಲೇ ಇರುತ್ತವೆ. ಇಂತಹ ಒಂದು ಪ್ರಯತ್ನಕ್ಕೆ ಇತ್ತೀಚೆಗೆ ಆಸ್ಟ್ರೇಲಿಯಾ ಸಹ ಕೈಹಾಕಿದೆ. ಒಂದು ಸಮೀಕ್ಷೆಯ ಪ್ರಕಾರ ಆಸ್ಟ್ರೇಲಿಯಾದಲ್ಲಿ ವರ್ಷಕ್ಕೆ 930 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಅಲ್ಲಿರುವ ಜನಸಂಖ್ಯೆ ಕೇವಲ ಎರಡೂವರೆ ಕೋಟಿ ಮಾತ್ರ. ಸರಾಸರಿ ಲೆಕ್ಕದಲ್ಲಿ ಪ್ರತಿಯೊಬ್ಬ ವರ್ಷದಲ್ಲಿ ಸುಮಾರು 150 ಲೀಟರ್ ಹಾಲನ್ನು ಕುಡಿಯುತ್ತಾನೆ ಎಂದು ಅಂದಾಜಿಸಿದರೂ ಸುಮಾರು 350 ಕೋಟಿಗೂ ಹೆಚ್ಚು ಲೀಟರ್ ಹಾಲು ಅಲ್ಲಿ ಹಾಗೆಯೇ ಉಳಿಯುತ್ತಿದೆ. ಸರ್ಕಾರ ಹಾಲು ಉತ್ಪಾದಕರಿಗೆ ಪ್ರತಿ ಲೀಟರಿಗೆ ನಲವತ್ತೇಳು ಸೆಂಟ್ ಅಂದರೆ ಭಾರತೀಯ ಮೌಲ್ಯದಲ್ಲಿ ಸುಮಾರು ಇಪ್ಪತ್ತೆರಡು ರೂಪಾಯಿ ಕೊಡುತ್ತಿದೆ.

ಹೀಗೆ ತನ್ನಲ್ಲಿ ಉಳಿಯುವ ಹಾಲನ್ನು ಆಸ್ಟ್ರೇಲಿಯಾ ಭಾರತಕ್ಕೆ ಸಾಗಿಸಲು ಚಿಂತಿಸುತ್ತಿದೆ ಎನ್ನಲಾಗಿದೆ. ಉಳಿದ ಹಾಲನ್ನು ದೊಡ್ಡ ದೊಡ್ಡ ಶೈತ್ಯಾಗಾರ ಹಡಗುಗಳಲ್ಲಿ ಭಾರತಕ್ಕೆ ಸಾಗಿಸಲು ಪ್ರತಿ ಲೀಟರಿಗೆ ಹೆಚ್ಚೆಂದರೆ ಒಂದು ರೂಪಾಯಿ ಸಾಕಾಗಲಿದೆ ಎಂದು ಅಂದಾಜಿಸಲಾಗಿದೆ. ಸ್ವಂತಕ್ಕೆ ಒಂದು ರೂಪಾಯಿ ಇಟ್ಟುಕೊಂಡರೂ ಡೀಲರ್, ಸ್ಟೋರೇಜ್, ವೇಸ್ಟೇಜ್ ಎಲ್ಲಾ ತೆಗೆದು ಮೂವತ್ತು ರೂಪಾಯಿಗೆ ಒಂದು ಲೀಟರ್ ಆಸ್ಟ್ರೇಲಿಯಾದ ಹಾಲನ್ನು ಭಾರತದ ಯಾವುದೇ ಮೂಲೆಯಲ್ಲಿ ಮಾರಬಹುದಾಗಿದೆ. ಇದರೊಂದಿಗೆ ಹಾಲು ಸರಬರಾಜು ಮಾಡುವ ಕಂಪನಿಗಳು ಎಂತಹ ದೊಡ್ಡ ಬಂಡವಾಳದ ಬಲ ಹೊಂದಿವೆಯೆಂದರೆ ಒಂದೆರಡು ವರ್ಷ ಭಾರತದಲ್ಲಿ ನಷ್ಟ ಮಾಡಿಕೊಂಡು ಇದಕ್ಕಿಂತ ಕಡಿಮೆ ಬೆಲೆಗೆ ಕೊಡುವ ಸಾಧ್ಯತೆ ಇದೆ. ಏಕೆಂದರೆ ನಮಗೆ ಹತ್ತು ರೂಪಾಯಿ ಅವರಿಗೆ ಇಪ್ಪತ್ತು ಸೆಂಟ್‌ಗಳು ಮಾತ್ರ. ಹೀಗೆ ಈ ದೈತ್ಯ ಹಾಲಿನ ಕಂಪನಿಗಳು ಒಂದೆರಡು ವರ್ಷ ಅಲ್ಲಿನ ಹಾಲನ್ನು ಇಲ್ಲಿ ಮಾರಾಟ ಮಾಡಿದ್ದೇ ಆದಲ್ಲಿ ಇಲ್ಲಿಯ ಅಮೂಲ್ ಮತ್ತು ನಂದಿನಿ ದಿವಾಳಿಯಾಗಲಿವೆ. ಇನ್ನು ಸಣ್ಣ ಹಾಲಿನ ಕಂಪನಿಗಳ ಬಗ್ಗೆ ಹೇಳುವುದೇ ಬೇಡ. ಹೀಗೆ ಭಾರತದ ಜನಸಂಖ್ಯೆಗೆ ಅನುಗುಣವಾಗಿ ಇಲ್ಲಿಯ ಡೇರಿ ಉದ್ಯಮವನ್ನು ಇನ್ನಿಲ್ಲವಾಗಿಸಲು ಆ ಕಂಪನಿಗಳಿಗೆ ವಾರ್ಷಿಕ ಬರೋಬ್ಬರಿ ಒಂಬೈನೂರು ಕೋಟಿ ರೂಪಾಯಿ ವ್ಯವಹಾರ ಸಾಕಾಗಲಿದೆ. ನಂತರ ತಮ್ಮಲ್ಲಿನ ಇಂತಹ ಕಸವನ್ನೆಲ್ಲಾ ಭಾರತದಲ್ಲಿ ಹಣವನ್ನಾಗಿ ಪರಿವರ್ತಿಸಿಕೊಳ್ಳುತ್ತಾರೆ.

ಇದು ಬರೀ ಹಾಲಿನ ಕಥೆಯಷ್ಟೇ. ಇದರಲ್ಲಿ ಚೀಸ್, ಮೊಸರು, ಹಣ್ಣು, ಕಾಳು, ಇತ್ಯಾದಿಗಳನ್ನು ಲೆಕ್ಕ ಹಾಕಿಲ್ಲ. ಅಲ್ಲಿ ಯಂತ್ರಗಳ ಸಹಾಯದಿಂದ ಎಷ್ಟು ಉತ್ಪಾದನೆ ಆಗುತ್ತಿದೆ ಎಂದರೆ ವರ್ಷಗಟ್ಟಲೆ ಶೈತ್ಯಾಗಾರದಲ್ಲಿ ಇಟ್ಟು ಮಾರಲಾಗುತ್ತಿದ್ದರೂ ಖಾಲಿಯಾಗದಷ್ಟು. ಒಂದು ಹೇಳಿಕೆಯ ಪ್ರಕಾರ ಆಸ್ಟ್ರೇಲಿಯಾದಲ್ಲಿ ತಿನ್ನುವ ಹಣ್ಣುಗಳು ಏನಿಲ್ಲವೆಂದರೂ ಒಂದು ವರ್ಷ ಹಳೆಯದಾಗಿರುತ್ತವಂತೆ. ಇನ್ನು ಹಾಲಂತು ಒಂದು ವಾರದಿಂದ ಹಿಡಿದು ತಿಂಗಳಷ್ಟು ಹಳೆಯದಾಗಿರುತ್ತದೆಯಂತೆ. ಇಲ್ಲಿ ನಾವುಗಳು ಸೇವಿಸುವ ನಂದಿನಿ ಹಾಲು ಅಬ್ಬಬ್ಬಾ ಅಂದರೂ ಒಂದೆರಡು ದಿನದಿಂದ ನಾಲ್ಕೈದು ದಿನಗಳಷ್ಟು ಮಾತ್ರ ಹಳೆಯದ್ದಾಗಿರುತ್ತದೆ. ಇಂತಹ ಬೇಡಿಕೆ ಮುಂದಿನ ದಿನಗಳಲ್ಲಿ ದೇಶಕ್ಕೆ ಮಾರಕವಾಗುವ ಎಲ್ಲಾ ಸಾಧ್ಯತೆಗಳಿವೆ ಎಂಬುದಾಗಿ ಅರ್ಥಶಾಸ್ತ್ರಜ್ಞರು ಅಭಿಪ್ರಾಯಿಸಿದ್ದಾರೆ. ಇದನ್ನೇ ಅಸ್ತ್ರವಾಗಿ ತೆಗೆದುಕೊಳ್ಳುವ ಬೇರೆ ದೇಶಗಳು ನಮ್ಮ ಆರ್ಥಿಕತೆಗೆ ಹೊಡೆತ ಕೊಡಲು ಸಜ್ಜಾಗುವ ಎಲ್ಲಾ ಸಾಧ್ಯತೆಗಳು ದಟ್ಟವಾಗಿವೆ. ಹೀಗೆ ಹಾಲೆಂಬುದು ಇಂದು ವ್ಯವಹಾರಿಕವಾಗಿಯೂ ತನ್ನ ಕುಲವನ್ನು ಕೆಡಿಸಿಕೊಳ್ಳುವ ದಿನ ದೂರವಿಲ್ಲ. ಇದರೊಂದಿಗೆ ನಕಲಿ ಹಾಲಿನ ದಂಧೆಯಂತೂ ಬಳಕೆದಾರರನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಕುಗ್ಗಿಸುತ್ತಿರುವುದಷ್ಟೇ ಅಲ್ಲದೆ ಹಾಲಿನ ಗುಣಮಟ್ಟವನ್ನು ಇನ್ನಿಲ್ಲವಾಗಿಸುತ್ತಿದೆ. ಇಡೀ ದೇಶದಲ್ಲಿ ಇದೊಂದು ಪಿಡುಗಿನಂತೆ ಹಬ್ಬಿ ದೇಶದ ಆರ್ಥಿಕತೆಗೆ ದೊಡ್ಡ ಹೊಡೆತವನ್ನು ಕೊಡುತ್ತಿದೆ. ಕೋಟ್ಯಾಂತರ ರೂಪಾಯಿ ಹಣ ಮಾಡುವ ಕಾಳಸಂತೆಯಾಗಿ ಈ ಅಕ್ರಮ ಉದ್ಯಮ ಪ್ರತಿಯೊಂದು ನಗರದಲ್ಲೂ ತಲೆ ಎತ್ತಿದೆ. ಇದಕ್ಕೆ ಬೆಂಗಳೂರು ಸಹ ಹೊರತಾಗಿಲ್ಲ.

ಬೆಂಗಳೂರು ನಗರದಲ್ಲಿ ನಕಲಿ ಹಾಲಿನ ದಂಧೆ ಅತಿ ಸಕ್ರಿಯವಾಗಿದೆ. ದಕ್ಷಿಣ ಭಾರತದಲ್ಲೇ ಅತಿ ಪ್ರಮುಖವಾದ ಈರೋಡ್ ಹಾಲು ಮಾಫಿಯಾ ತನ್ನ ಕಾಳದಂಧೆಯನ್ನು ನಿರಾಂತಕವಾಗಿ ಇಲ್ಲಿಯೂ ಮುಂದುವರೆಸಿದೆ. ಅತಿ ಕಡಿಮೆ ಬೆಲೆಗೆ ಸಿಗುವ ಈ ಹಾಲಿನಲ್ಲಿ ಯಾವುದೇ ಕೊಬ್ಬಿನಂಶ, ಕ್ಯಾಲ್ಸಿಯಂ ಅಂಶವಿರುವುದಿಲ್ಲ. ಬದಲಾಗಿ ಆರೋಗ್ಯಕ್ಕೆ ಹಾನಿಕಾರಕವಾಗಿರುವ ಘಾರಕ ರಾಸಾಯನಿಕಗಳು ಅಡಕವಾಗಿರುತ್ತವೆ. ಕಾಸ್ಟಿಕ್ ಸೋಡಾ ಬಳಸಿ ತಯಾರಿಸುವ ಕಲಬೆರಕೆ ಈ ಹಾಲಿನಲ್ಲಿ ಗರಿಷ್ಠ ಪ್ರಮಾಣದಲ್ಲಿ ಆ್ಯಸಿಡ್ ಹೆಚ್ಚಾಗಿ, ಜಠರಕ್ಕೆ ತೊಂದರೆಯಾಗುತ್ತದೆ. ರಕ್ತ ಮಲಿನಗೊಂಡು ಮೂತ್ರಪಿಂಡ ವೈಫಲ್ಯಕ್ಕೂ ಕಾರಣವಾಗುತ್ತದೆ. ಮಲಿನ ರಕ್ತ ಮಿದುಳು ಪ್ರವೇಶಿಸಿದರೆ ರಕ್ತಸ್ರಾವವಾಗಿ ಸಾವು ಸಂಭವಿಸುವ ಸಾಧ್ಯತೆಗಳು ಹೆಚ್ಚಾಗಿವೆ. ಬೆಳೆಯುವ ಹೆಣ್ಣು ಮಕ್ಕಳು ಈ ಹಾಲನ್ನು ಸೇವಿಸಿದರೆ ಅವಧಿಗೂ ಮುನ್ನವೇ ಋತುಮತಿಯಾಗುವ ತೊಂದರೆ ಎದುರಿಸಬೇಕಾಗುತ್ತದೆ. ಹುಡುಗರಲ್ಲಿ ವೀರ್ಯಾಣುಗಳ ಕೊರತೆ ಸಮಸ್ಯೆ ಕಂಡುಬರುತ್ತದೆ. ಆರಂಭದಲ್ಲಿ ಏನೂ ಆಗದಿದ್ದರೂ ಪದೇ ಪದೇ ಸೇವಿಸಿದ್ದಲ್ಲಿ ಸಮಸ್ಯೆ ಕಟ್ಟಿಟ್ಟ ಬುತ್ತಿ.

ಲಾಭಕ್ಕಾಗಿ ತಯಾರಿಸುವ ಈ ನಕಲಿ ಅಥವಾ ಕಲಬೆರಕೆ ಹಾಲು ಹೆಸರಿಗಷ್ಟೇ ಹಾಲು. ಹಾಗಾಗಿ ಇದನ್ನು ಬರೀ ಹಾಲಲ್ಲ ಹಾಲಾಹಲ ಎನ್ನಬಹುದು. ಇಂತಹ ಹಾಲೆಂಬ ಬಿಳಿ ದ್ರಾವಣವನ್ನು ತಯಾರಿಸಲು ಉಪಯೋಗವಾಗುತ್ತಿರುವುದು ಪೂರ್ತಿ ವಿಷಕಾರಿ ರಾಸಾಯನಿಕಗಳು. ಬಟ್ಟೆ ಕಲೆ ತೆಗೆಯಲು ಬಳಸುವ ಕಾಸ್ಟಿಕ್ ಸೋಡಾ ಮತ್ತು ಗೆಡ್ಡೆ ಗೆಣಸಿನ ಹಿಟ್ಟು ಕಲಬೆರಕೆ ಹಾಲಿನ ಮೂಲವಸ್ತು. ಇನ್ನು ನೊರೆಗೆ ಒಂದಷ್ಟು ಸಾಬೂನು ಪೌಡರ್, ರುಚಿಗೊಂದಿಷ್ಟು ಸ್ಟಾರ್ಚ್ ಪೌಡರ್ ಸೇರಿಸಿ ನೀರಿಗೆ ಹಾಕಿದರೆ ಈ ಹಾಲು ರೆಡಿ. ಹೀಗಾಗಿ ಇದನ್ನು ಹಾಲೆನ್ನದೆ ಸೋಪಿನ ನೊರೆ ಎಂದರೂ ತಪ್ಪಾಗಲಾರದು.

ಹೀಗೆ ವಿದೇಶಿ ಹಾಲಿನ ಆಕ್ರಮಣ, ನಕಲಿ ಹಾಲಿನ ಹಾವಳಿ ಒಂದೆಡೆಯಾದರೆ ಮತ್ತೊಂದು ಕಡೆ ವಿದೇಶಿ ತಳಿಗಳು ಉತ್ಪತ್ತಿ ಮಾಡುತ್ತಿರುವ ಹಾಲು ಇಂದು ಹಾಲಾಗಿ ಉಳಿದಿಲ್ಲ. ದೇಶಿ ಹಸುಗಳನ್ನು ಹೊರತುಪಡಿಸಿ ಉಳಿದ ವಿದೇಶಿ ಮತ್ತು ಮಿಶ್ರ ತಳಿಗಳಿಗೆ ನೀಡುವ ಹಾರ್ಮೋನ್, ರಾಸಾಯನಿಕಯುಕ್ತ ಮೇವು, ಕೃತಕ ಗರ್ಭಧಾರಣೆ ಮತ್ತು ನಿಂತಲ್ಲೇ ಜೀವನ ಕಳೆಯುವ ಇವುಗಳ ದೈಹಿಕ ಸ್ಥಿತಿ ಇವುಗಳು ನೀಡುವ ಹಾಲನ್ನು ಕೇವಲ ಬಿಳಿ ದ್ರಾವಣವನ್ನಾಗಿಸಿದೆ. ಕರುವಿಗೆ ಕೊಟ್ಟು ಉಳಿದದ್ದನ್ನು ಆತ್ಮೀಯತೆಯಿಂದ ಸುರಿಸುವ ವಾತ್ಸಲ್ಯಮಯ ಹಾಲು ಒಂದು ತಕ್ಕಡಿಯಲ್ಲಾದರೆ, ಕೆಚ್ಚಲು ತುಂಬಿ ನೋವು ಸಹಿಸಲಾಗದೇ ಒತ್ತಡದಿಂದಾಗಿ ಹಿಂಡಬೇಕಾದ ಹಾಲು ಇನ್ನೊಂದು ತಕ್ಕಡಿಯಲ್ಲಿ ಕಾಣುವಂತಾಗಿದೆ. ಇದನ್ನು ಸಮಭಾರ ಮಾಡುವುದಾದರು ಹೇಗೆ ಎಂಬುದೇ ಪ್ರಶ್ನೆಯಾಗಿದೆ. ಭಾರತೀಯ ಹಸುಗಳ ಕೆಚ್ಚಲು ಸರಾಸರಿಯಾದ ಗಾತ್ರ ಮತ್ತು ಆಕಾರವನ್ನು ಹೊಂದಿವೆ. ಅದೇ ಹೈಬ್ರಿಡ್ ಮತ್ತು ಪಾಶ್ಚಿಮಾತ್ಯ ಹಸುಗಳು ಮೊಣಕಾಲಿನ ಕೆಳಗಿನವರೆಗೂ ಕೆಚ್ಚಲನ್ನು ಹೊಂದಿರುತ್ತವೆ. ಸಾಮಾನ್ಯವಾಗಿ ಡೇರಿ ಹಸುಗಳ ಕೆಚ್ಚಲು ಅವುಗಳ ಮೂಲ ಭಾಗಗಳಿಗಿಂತ 5 ರಿಂದ 6 ಪಟ್ಟು ಹೆಚ್ಚಿದ್ದು, ಬಹುತೇಕ ನೆಲವನ್ನು ಮುಟ್ಟುತ್ತದೆ ಮತ್ತು ಅಸಹಜವಾದುದಾಗಿರುತ್ತದೆ.

ಕ್ರಾಸ್‌ಬ್ರೀಡ್ ಅಥವಾ ಪಾಶ್ಚಿಮಾತ್ಯ ದನಗಳಿಗೆ ನಮ್ಮ ದೇಶಿ ದನಗಳಂತೆ ಹೊರಗಡೆ ಹೋಗಿ ಮೇಯುವ ಪರಿಪಾಠವಿಲ್ಲ. ಇಂತಹ ಸಂದರ್ಭದಲ್ಲಿ ಹುಲ್ಲುಗಾವಲಿನ ಕೊರತೆ ಕಾಡಿದ್ದಲ್ಲಿ ಇವುಗಳಿಗೆ ನಿಂತಲ್ಲಿಗೆ ನೀಡಿದ್ದೇ ಆಹಾರವಾಗಲಿದೆ. ಮೊದಲೇ ಬಿಸಿಲೆಂದರೇ ಆಗದ ಇವುಗಳಿಗೆ ನೀಡುತ್ತಿರುವ ಕಲಬೆರಕೆ ಆಹಾರ ಹಾಲನ್ನು ಕುಲಗೆಡಿಸುವುದಷ್ಟೇ ಅಲ್ಲದೆ ಬಿಸಿಲಿಗೆ ಹೋಗದಿರುವುದರಿಂದ ಇವುಗಳ ಹಾಲಿನಲ್ಲಿ ವಿಟಮಿನ್ ಡಿ ಸಹಜವಾಗಿ ಕಡಿಮೆ ಪ್ರಮಾಣದಲ್ಲಿರುತ್ತದೆ. ಇಂತಹ ಹಾಲನ್ನು ಕುಡಿದವರಿಗೂ ವಿಟಮಿನ್ ಡಿ ಅಂಶ ಕಡಿಮೆಯಾಗುತ್ತದೆ ಎಂಬುದಾಗಿ ವೈದ್ಯರು ಹೇಳುವುದು ಸಾಮಾನ್ಯವಾಗಿದೆ. ಇದಷ್ಟೇ ಅಲ್ಲದೆ ಇವುಗಳ ಹಾಲು ಹೆಚ್ಚಿನ ಕೊಲೆಸ್ಟ್ರಾಲ್‌ನಿಂದ ಕೂಡಿದ್ದು ಇವುಗಳಲ್ಲಿನ ಜೀನ್‌ನಿಂದಾಗಿ ಪರೋಕ್ಷವಾಗಿ ಆರೋಗ್ಯದ ಮೇಲೆ ಕೆಟ್ಟ ಪರಿಣಾಮಗಳುಂಟಾಗುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಎನ್ನುವಂತಾಗಿದೆ. ಹೀಗಾಗಿ ಇಂತಹ ವಿದೇಶಿ ಮತ್ತು ಕ್ರಾಸ್‌ಬ್ರೀಡ್ ತಳಿಗಳ ಹಾಲಿನಲ್ಲಿ ಆಯುರ್ವೇದ ಹೇಳಿದ ಗುಣಗಳು ಬರುವುದಾದರೂ ಹೇಗೆಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಒಂದರ್ಥದಲ್ಲಿ ಹೇಳಬೇಕೆಂದರೆ ರೊಟ್ಟಿ ಹಳಸಿತ್ತು, ನಾಯಿ ಹಸಿದಿತ್ತು ಅಷ್ಟೇ. ಬದುಕು ಚಕ್ರವಿದ್ದಂತೆ. ಮೇಲೆ ಹೋದದ್ದು ಕೆಳಗೆ ಇಳಿಯಲೇ ಬೇಕು. ಜನರಲ್ಲಿ ಈಗ ಅರಿವು ಹೆಚ್ಚತೊಡಗಿದೆ. ದೇಶಿ ಗೋವುಗಳ ಮಹತ್ವದ ಅರಿವಾಗತೊಡಗಿದೆ.

**30-07-2024**
**Hosadiganta Pg 06**

# ಟೊಮೆಟೊ ಕೆಜಿಗೆ 60 ರೂ. ನಿಗದಿ

## ಸಚಿವ ಜೋಶಿ ಘೋಷಣೆ



**ವಿಕ ಸುದ್ದಿಲೋಕ** ಹುಬ್ಬಳ್ಳಿ

ಮಾರುಕಟ್ಟೆಯಲ್ಲಿ ಏರಿಳಿತ ಕಾಣುತ್ತಿರುವ ಟೊಮೆಟೊ ಬೆಲೆ ಸ್ಥಿರತೆಗೆ ಕ್ರಮ ಕೈಗೊಳ್ಳಲಾಗಿದ್ದು, ಕೆಜಿಗೆ 60 ರೂ. ದರ ನಿಗದಿಪಡಿಸಲಾಗಿದೆ ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

ಹೊಸದಿಲ್ಲಿಯ ಕೃಷಿ ಭವನದಲ್ಲಿ ಸೋಮವಾರ ಭಾರತೀಯ ರಾಷ್ಟ್ರೀಯ ಸಹಕಾರಿ ಗ್ರಾಹಕರ ಒಕ್ಕೂಟದ ಟೊಮೆಟೊ ವ್ಯಾನ್‌ಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ''ದಿಲ್ಲಿ,ಎನ್‌ಸಿಆರ್ ಚಿಲ್ಲರೆ ಮಾರುಕಟ್ಟೆಗಳಲ್ಲಿ ಟೊಮೆಟೊ ಬೆಲೆ ಏರಿಳಿತ ಕಾಣುತ್ತಿದ್ದು, ಸ್ಥಿರತೆ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಸದ್ಯಕ್ಕೆ ಪ್ರಮುಖ 18 ಸ್ಥಳಗಳಲ್ಲಿ ಮಾರಾಟ ವ್ಯವಸ್ಥೆ ಮಾಡಲಾಗುವುದು. ಗ್ರಾಹಕರ ಅನುಕೂಲ ಮತ್ತು ಬೇಡಿಕೆಗೆ ಅನುಗುಣವಾಗಿ ಈ ಸ್ಥಳಗಳ ಸಂಖ್ಯೆ ಹೆಚ್ಚಿಸಲಾಗುತ್ತದೆ ಎಂದು ಅವರು ತಿಳಿಸಿದರು. ಭಾರತೀಯ ರಾಷ್ಟ್ರೀಯ ಸಹಕಾರಿ ಗ್ರಾಹಕರ ಒಕ್ಕೂಟದ ಟೊಮೆಟೊ ವ್ಯಾನ್‌ಗಳು ದೆಹಲಿ- ಎನ್‌ಸಿಆರ್ ಪ್ರದೇಶಗಳಲ್ಲಿ ಲಭ್ಯವಿರುತ್ತವೆ,'' ಎಂದರು. ರಾಜ್ಯ ಸಚಿವ ಬಿ.ಎಲ್.ವರ್ಮಾ ಇದ್ದರು.

**30-07-2024**
**V-karnataka Pg 06**

For more information visit
University Library Website
Web - uasbagrilibindia.org
E-mail- librarian@uasbangalore.edu.in

# ಆಹಾರದಲ್ಲಿರಲಿ ಪ್ರೋಟೀನ್

ಚೈತ್ರ ಕೆ. ಆಚಾರ್ಯ

ನಮ್ಮ ದೇಹದ ಆರೋಗ್ಯಕರ ಕಾರ್ಯನಿರ್ವಹಣೆಗೆ ಅಗತ್ಯವಾದ ಪೋಷಕಾಂಶಗಳಲ್ಲಿ ಪ್ರೋಟೀನ್ ಕೂಡ ಒಂದು. ನಾವು ಸೇವಿಸುವ ಆಹಾರದ ಒಟ್ಟು ಕ್ಯಾಲೋರಿಯಲ್ಲಿ ಕನಿಷ್ಠ ಶೇ 15ರಷ್ಟು ಮತ್ತು ಗರಿಷ್ಠ ಶೇ 35ರಷ್ಟು ಪ್ರೋಟೀನ್ ಇರಬೇಕು. ಪ್ರೋಟೀನ್‌ನ ಪ್ರತಿ ಗ್ರಾಂನಿಂದ ನಾಲ್ಕು ಕ್ಯಾಲೋರಿಗಳು ಒದಗಿಸುತ್ತವೆ. ಅಮೈನೋ ಆಮ್ಲಗಳ ಮೂಲವೇ ಪ್ರೋಟೀನ್.

ಹುಟ್ಟಿದ ಮಗುವಿನಿಂದ ಹಿಡಿದು ವಯಸ್ಸಾದ ವೃದ್ಧರವರೆಗೂ, ದೇಹದ ಪ್ರತಿಯೊಂದು ಭಾಗಕ್ಕೂ ಪ್ರೋಟೀನ್‌ನ ಅವಶ್ಯಕತೆಯಿದೆ. ದೇಹದ ಮಾಂಸಖಂಡಗಳ ಬೆಳವಣಿಗೆ, ಮೂಳೆಗಳ ಸದೃಢತೆ, ಹಾರ್ಮೋನ್‌ಗಳ ಸಮತೋಲನ ಹಾಗೂ ರೋಗನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಪ್ರೋಟೀನ್‌ನ ಪಾತ್ರ ಮಹತ್ವದ್ದು. ದೇಹದಲ್ಲಿನ ಅಂಗಾಂಶ (ಆರೋಗ್ಯಕರ ಚರ್ಮ, ಕೂದಲು, ಉಗುರು) ಇತ್ಯಾದಿಗಳ ರಚನೆ, ಬೆಳವಣಿಗೆ, ಅವುಗಳ ದುರಸ್ತಿಗೆ ಮತ್ತು ಕಿಣ್ವ, ರಾಸಾಯನಿಕಗಳ ಉತ್ಪಾದನೆಗೂ ಪ್ರೋಟೀನ್‌ನ ಅಗತ್ಯವಿದೆ. ಹಸಿವನ್ನು ಕಡಿಮೆ ಮಾಡಿ, ಅತಿಯಾಗಿ ತಿನ್ನುವ ಸಾಧ್ಯತೆಯನ್ನು ಕಡಿಮೆ ಮಾಡುವುದರಿಂದ ಇದು ದೇಹದ ತೂಕವನ್ನು ಕಡಿಮೆ ಮಾಡುವಲ್ಲಿಯೂ ಪ್ರಯೋಜನಕಾರಿ. ಚಯಾಪಚಯ ಕ್ರಿಯೆಯ ಸಮರ್ಥ ನಿರ್ವಹಣೆಗೆ ಹಾಗೂ ಕೊಬ್ಬಿನ ಶೇಖರಣೆಯನ್ನು ಕಡಿಮೆ ಮಾಡಲೂ ಸಹಕಾರಿಯಾಗಿದೆ. ಅಧಿಕ ರಕ್ತದೊತ್ತಡ ಮತ್ತು ಮಧುಮೇಹಗಳನ್ನು ನಿಯಂತ್ರಿಸುವಲ್ಲಿಯೂ ಪ್ರೋಟೀನ್‌ನ ಪಾತ್ರವಿದೆ.

## ದಿನಕ್ಕೆ ಎಷ್ಟು ಬೇಕು?

ದೇಹದ ತೂಕ, ವಯಸ್ಸು, ಲಿಂಗ ಮತ್ತು ಚಟುವಟಿಕೆಯ ಮಟ್ಟವನ್ನು ಅವಲಂಬಿಸಿ ಪ್ರೋಟೀನ್‌ನ ಪ್ರಮಾಣ ನಿರ್ಧಾರವಾಗುತ್ತದೆ. ಇದು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಕ್ರೀಡಾಪಟುಗಳು, ಬಾಡಿ ಬಿಲ್ಡರ್ಸ್, ಏಡ್ಸ್-ಕ್ಯಾನ್ಸರ್ ರೋಗಿಗಳಿಗೆ, ಗರ್ಭಿಣಿಯರಿಗೆ, ಹಾಲುಣಿಸುವವರಿಗೆ, ಗಾಯ-ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಳ್ಳುವವರಿಗೆ ಹೆಚ್ಚಿನ ಪ್ರೋಟೀನ್‌ನ ಅಗತ್ಯವಿದೆ.

## ಆಹಾರಗಳು ಯಾವುವು?

ದೇಹದ ಈ ಎಲ್ಲ ಅಗತ್ಯಗಳನ್ನೂ ಪೂರೈಸಲು ನಾವು ಪ್ರಾಣಿ ಹಾಗೂ ಸಸ್ಯಮೂಲಗಳಿಂದ ಪ್ರೋಟೀನನ್ನು ಪಡೆಯಬಹುದು. ಮಾಂಸ, ಸಮುದ್ರಾಹಾರ, ಮೊಟ್ಟೆ, ಹಾಲು ಹಾಗೂ ಅದರ ಉಪಉತ್ಪನ್ನಗಳಾದ ಚೀಸ್, ಯೋಗರ್ಟ್, ಪನೀರ್ – ಇವು ಸಂಪೂರ್ಣ ಪ್ರೋಟೀನ್‌ಗಳು. ಇವುಗಳಲ್ಲಿ ದೇಹಕ್ಕೆ ಬೇಕಾದ ಎಲ್ಲ ಅಮೈನೋ ಆಮ್ಲಗಳೂ ಇರುತ್ತವೆ. ದ್ವಿದಳ ಧಾನ್ಯಗಳು (ಒಣ ಬೀನ್ಸ್, ಬಟಾಣಿ, ಅವರೆಕಾಳು, ಕಡಲೆ), ಧಾನ್ಯಗಳು (ನವಣೆ, ಓಟ್ಸ್), ಬೇಳೆಕಾಳುಗಳು, (ಹೆಸರುಕಾಳು, ಹುರುಳಿಕಾಳು), ಮೊಳಕೆಕಾಳುಗಳು, ಒಣಹಣ್ಣುಗಳು (ಬಾದಾಮಿ, ವಾಲ್ನಟ್ಸ್, ಗೋಡಂಬಿ, ಕಡಲೆಕಾಯಿ), ಬೀಜಗಳು, (ಅಗಸೆಬೀಜ, ಸೂರ್ಯಕಾಂತಿ ಬೀಜ, ಚಿಯಾಬೀಜ, ಕುಂಬಳಕಾಯಿಬೀಜ), ಸೊಪ್ಪುಗಳು, ತರಕಾರಿ, ಹಣ್ಣುಗಳಲ್ಲಿ ಪ್ರೋಟೀನ್‌ಗಳು ಇರುತ್ತವೆ. ಸಸ್ಯಾಹಾರಿಗಳಲ್ಲಿ ಪ್ರೋಟೀನ್‌ನ ಅವಶ್ಯಕತೆಯನ್ನು ಪೂರೈಸುವುದು ಅಸಾಧ್ಯವೇನಲ್ಲ. ದಿನನಿತ್ಯದ ಆಹಾರಪದ್ಧತಿಯ ಸಂಯೋಜನೆಯಿಂದ ದೇಹಕ್ಕೆ ದೈನಂದಿನ ಪ್ರೋಟೀನ್‌ನ ಅಗತ್ಯವನ್ನು ಪೂರೈಸಬಹುದು.

ಕಾರ್ಬೋಹೈಡ್ರೇಟ್‌ಗಳಿಗಿಂತ ಸಸ್ಯ ಆಧಾರಿತ ಪ್ರೋಟೀನ್‌ಗಳು ತೂಕವನ್ನು ಕಳೆದುಕೊಳ್ಳಲು ಸಹಾಯ ಮಾಡುತ್ತವೆ. ಇವು ಫೈಬರ್, ಉತ್ಕರ್ಷಣ ನಿರೋಧಕಗಳು, ಫೈಟೋಕೆಮಿಕಲ್, ವಿಟಮಿನ್‌ಗಳು, ಖನಿಜ-ಲವಣಗಳನ್ನು ಒದಗಿಸುತ್ತವೆ. ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಮತ್ತು ದೀರ್ಘಕಾಲದ ಕಾಯಿಲೆಗಳನ್ನು ತಡೆಗಟ್ಟುವಲ್ಲಿ ಇವು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಪ್ರಾಣಿಮೂಲ ಪ್ರೋಟೀನ್‌ಗಳು ಅಗತ್ಯವಾದ ಕೊಬ್ಬಿನಾಮ್ಲಗಳು, ಕಬ್ಬಿಣ, ವಿಟಮಿನ್ ಬಿ12ನಂತಹ ಸೂಕ್ಷ್ಮ ಪೋಷಕಾಂಶಗಳನ್ನು ಹೊಂದಿರುತ್ತವೆ. ಪ್ರೋಟೀನ್‌ನ ಪ್ರಮಾಣದ ಜೊತೆಗೆ ಗುಣಮಟ್ಟವೂ ಮುಖ್ಯ. ದಿನನಿತ್ಯದ ಪಥ್ಯದಿಂದಲೇ ನೈಸರ್ಗಿಕವಾಗಿ ಪ್ರೋಟೀನನ್ನು ಪಡೆದುಕೊಳ್ಳುವುದು ಒಳ್ಳೆಯದು.

## ಕಡಿಮೆಯಾದಲ್ಲಿ...

ನಿರಂತರ ಆಯಾಸ, ಅತಿಯಾದ ತೂಕ ಇಳಿಕೆ, ಚರ್ಮದ ಹಾನಿ, 'ಎಡೆಮಾ', ದುರ್ಬಲ ಸ್ನಾಯುಗಳು, ಕೂದಲು ಉದುರುವಿಕೆ, ಚಯಾಪಚಯ ಕ್ರಿಯೆ ಮಂದಗೊಳ್ಳುವಿಕೆ, ಮಂದಗತಿಯಲ್ಲಿ ಗಾಯ ಗುಣವಾಗುವುದು, ರೋಗನಿರೋಧಕ ಶಕ್ತಿ ಕುಗ್ಗುವುದು – ಇವೆಲ್ಲವೂ ಪ್ರೋಟೀನ್ ಕೊರತೆಯ ಲಕ್ಷಣಗಳು. ಮಕ್ಕಳಲ್ಲಿ 'ಕ್ವಾಶಿಯೋರ್ಕರ್', 'ಮಾರಸ್ಮಸ್'ನಂತಹ ತೊಂದರೆಗಳೂ ಕಾಣಿಸಿಕೊಳ್ಳಬಹುದು. ಅವಶ್ಯಕತೆಯನ್ನು ಮೀರಿದ ಪ್ರೋಟೀನ್‌ನ ಸೇವನೆಯಿಂದ ಮಲಬದ್ಧತೆ, ನಿರ್ಜಲೀಕರಣ, ಬಾಯಿಯ ಕೆಟ್ಟ ವಾಸನೆ, ಜೀರ್ಣಕ್ರಿಯೆ, ಸಮಸ್ಯೆ, ಮೂಳೆಯ ಕ್ಯಾಲ್ಸಿಯಂ ನಷ್ಟ, ತೂಕ ಹೆಚ್ಚಳ, ಮೂತ್ರಪಿಂಡ ಕಾಯಿಲೆ ಇನ್ನಿತರ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.

ಕಿಡ್ನಿ, ಲಿವರ್, ಫಿನೈಲ್ಕೆಟೋನೂರಿಯಾ ಮುಂತಾದ ಕಾಯಿಲೆಗಳಿಗೆ ತುತ್ತಾಗಿರುವವರಲ್ಲಿ ಪ್ರೋಟೀನನ್ನು ನಿರ್ಬಂಧಿಸಬೇಕಾಗುತ್ತದೆ. ಪ್ರೋಟೀನ್‌ಯುಕ್ತ ಆಹಾರಗಳಲ್ಲಿ ಕೊಬ್ಬಿನಾಂಶ ಅಧಿಕವಾಗಿದ್ದರೆ ಹೃದಯಸಂಬಂಧಿತ ಸಮಸ್ಯೆಯೂ ತಪ್ಪಿದಲ್ಲ. ಪ್ರೋಟೀನ್‌ಯುಕ್ತ ಆಹಾರಗಳನ್ನು ಸೇವಿಸುವಾಗ ಸಂಸ್ಕರಿಸಿದ ಕಾರ್ಬೋಹೈಡ್ರೇಟ್, ಸ್ಯಾಚುರೇಟೆಡ್ ಕೊಬ್ಬುಗಳ ಬಳಕೆಯನ್ನು ಮಿತಗೊಳಿಸಬೇಕು. ಪ್ರೋಟೀನ್‌ಗಳ ಸೇವನೆಯನ್ನು ಕಾರ್ಬೋಹೈಡ್ರೇಟ್, ವಿಟಮಿನ್‌ಗಳು, ಖನಿಜಗಳು, ಮತ್ತು ಫೈಬರ್‌ನಂತಹ ಅಗತ್ಯ ಪೋಷಕಾಂಶಗಳೊಂದಿಗೆ ಸಮತೋಲನಗೊಳಿಸಲು ವಿಫಲವಾದರೆ ಹಲವಾರು ತೊಡಕುಗಳು ಎದುರಾಗಬಹುದು. ಸಮತೋಲನ ಆಹಾರವನ್ನು ಸೇವಿಸಿದರೆ ಎಲ್ಲ ರೀತಿಯ ಅಮೈನೋ ಆಮ್ಲಗಳ ಅವಶ್ಯಕತೆಗಳನ್ನೂ ಪೂರೈಸಬಹುದು.

30-07-2024
Prajavani
Pg 04

# ಅಡಿಕೆ ಬೆಳೆಗಾರರನ್ನು ಸಂರಕ್ಷಿಸಿ

**ಕ**ಳೆದ ಮೂರು ತಿಂಗಳಲ್ಲಿ ಸುಮಾರು 3 ಸಾವಿರ ಟನ್ ವಿದೇಶಿ ಅಡಿಕೆ ಅಕ್ರಮವಾಗಿ ಭಾರತಕ್ಕೆ ಆಮದಾಗಿರುವುದನ್ನು ಕೇಂದ್ರ ಸರ್ಕಾರವೇ ಅಧಿಕೃತವಾಗಿ ಬಹಿರಂಗಪಡಿಸಿದೆ. ಅಂದರೆ, ಈ ಜಾಲ ಪ್ರಬಲವಾಗಿ ಬೆಳೆದು, ದೇಶೀಯ ಮಾರುಕಟ್ಟೆಯಲ್ಲಿ ಅಸ್ಥಿರತೆ ಸೃಷ್ಟಿಸಿದೆ ಎಂಬುದಕ್ಕೆ ಕೇಂದ್ರದ ಈ ಹೇಳಿಕೆ ಸಾಕ್ಷಿಯಾಗಿದೆ. ನಮ್ಮ ದೇಶದಲ್ಲಿ 1.6 ಕೋಟಿ ಅಡಿಕೆ ಬೆಳೆಗಾರರಿದ್ದು, 15.63 ಲಕ್ಷ ಟನ್ ಅಡಿಕೆ ಪ್ರತಿ ವರ್ಷ ಉತ್ಪಾದನೆ ಆಗುತ್ತಿದೆ. ಆದರೂ, 24 ಸಾವಿರ ಟನ್ ಅಡಿಕೆ ಆಮದು ಮಾಡಿಕೊಳ್ಳಲಾಗುತ್ತಿದೆ. ಕಳ್ಳಸಾಗಣೆಯ ಮೂಲಕ ದೇಶವನ್ನು ಪ್ರವೇಶಿಸುತ್ತಿರುವ ಅಡಿಕೆಯಿಂದಾಗಿ ಸ್ಥಳೀಯ ಅಡಿಕೆ ಬೆಳೆಗಾರರಿಗೆ ಭಾರಿ ಹೊಡೆತ ಬೀಳುತ್ತಿದೆ.



ಅಕ್ರಮ ಆಮದು ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿ

ಮ್ಯಾನ್ಮಾರ್‌ನಿಂದ ಮಿಜೋರಾಂಗೆ ಅಡಿಕೆ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸುವಂತೆ ಗುವಾಹಟಿ ಹೈಕೋರ್ಟ್‌ನ ಐಜ್ವಾಲ್ ಪೀಠ ಕೇಂದ್ರ ತನಿಖಾ ಸಂಸ್ಥೆಗೆ (ಸಿಬಿಐ) ಕಳೆದ ವಾರವಷ್ಟೇ ಆದೇಶಿಸಿದೆ. ಕಳ್ಳಸಾಗಣೆ ತಡೆಯಲು ಸರ್ಕಾರ ವಿಫಲಗೊಂಡಿದೆ ಎಂದು ಆರೋಪಿಸಿರುವ ಮಿಜೋರಾಂನ ಅಡಿಕೆ ಬೆಳೆಗಾರರು, ತಾವೇ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿ ಕಾನೂನನ್ನು ಕೈಗೆತ್ತಿಕೊಂಡಿದ್ದಾರೆ. ಕಳ್ಳಸಾಗಣೆ ಮೂಲಕ ಬರುತ್ತಿರುವ ಅಡಿಕೆ ಹಾಗೂ ಸಾಗಿಸುತ್ತಿರುವ ಹಲವು ವಾಹನಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜಕಾರಣಿಗಳು, ಉನ್ನತ ಅಧಿಕಾರಿಗಳು ಮತ್ತು ಕಳ್ಳಸಾಗಣೆದಾರರ ನಡುವಿನ ಹೊಂದಾಣಿಕೆಯಿಂದ ಈ ಅವ್ಯವಹಾರ ನಡೆಯುತ್ತಿದ್ದು, ಹಲವು ವರ್ಷಗಳಾದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದೂ ಆರೋಪಿಸಿದ್ದಾರೆ.

ಈ ಸಮಸ್ಯೆ ಈಶಾನ್ಯ ರಾಜ್ಯಗಳಿಗೆ ಮಾತ್ರ ಸೀಮಿತವಾಗಿಲ್ಲ. ಅಡಿಕೆ ಬೆಳೆಯ ಪಾರಂಪಾರಿಕ ಪ್ರದೇಶಗಳಾದ ಕರ್ನಾಟಕದ ಕರಾವಳಿ ಮತ್ತು ಮಲೆನಾಡಿಗೂ ಕಳ್ಳಸಾಗಾಣಿಕೆಯ ಕರಿನೆರಳು ಬೀಳುತ್ತಿದೆ. ಅಡಿಕೆಯ ಕಾನೂನುಬಾಹಿರು ಆಮದಿನ ಬಗ್ಗೆ ಕ್ಯಾಂಪ್ಕೋ ಸಂಸ್ಥೆ ಈಗಾಗಲೇ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪತ್ರ ಬರೆದಿದ್ದು, ಸೂಕ್ತ ಕ್ರಮಕ್ಕಾಗಿ ಆಗ್ರಹಿಸಿದೆ. ಕಳ್ಳಸಾಗಾಣಿಕೆಯಿಂದ ದೇಶೀಯ ಅಡಿಕೆ ಮಾರುಕಟ್ಟೆಯಲ್ಲಿ ಅಸ್ಥಿರತೆ ಉಂಟಾಗಿದ್ದು, ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ. ಅಕ್ರಮ ಅಡಿಕೆ ಸಾಗಾಣಿಕೆ ಮಾಫಿಯಾವು ರಾಜಕೀಯವಾಗಿಯೂ ಪ್ರಬಲವಾಗಿದೆ. ಇದರ ನಿಯಂತ್ರಣಕ್ಕೆ ಮುಂದಾಗುವ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಲಾಗುತ್ತದೆ ಇಲ್ಲವೆ ಬೆದರಿಕೆ ಹಾಕಲಾಗುತ್ತದೆ. ಈ ಹಿಂದೆ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐ ದೇಶದ ಹಲವೆಡೆ ದಾಳಿ ನಡೆಸಿ, ಅಕ್ರಮವಾಗಿ ವಿದೇಶದಿಂದ ಆಮದು ಮಾಡಿಕೊಂಡಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಅಡಿಕೆಯನ್ನು ವಶಪಡಿಸಿಕೊಂಡಿದ್ದವು. ಆದರೂ, ಕಳ್ಳಮಾರ್ಗಗಳ ಮೂಲಕ ಆಮದು ಮುಂದುವರಿದಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಈ ಪಿಡುಗಿಗೆ ಕೇಂದ್ರ ಸರ್ಕಾರ ಕಡಿವಾಣ ಹಾಕಬೇಕು. ಸ್ಥಳೀಯ ಬೆಳೆಗಾರರನ್ನು ರಕ್ಷಿಸಬೇಕು.

30-07-2024
Vijayavani
Pg 01